2. ವರಾಹಿ ಭೂಗರ್ಭ, ವಿದ್ಯುತ್‌ಗಾರಕ್ಕೆ 3 ಮತ್ತು 4ನೇ ಘಟಕಗಳನ್ನು ಅನುಷ್ಠಾನಗೊಳಿಸುವುದು
3. ಸರಪಾಡಿ ಜಲವಿದ್ಯುತ್ ಯೋಜನೆ
4. ದೊಂಡೇಲ ಕಿರು ಜಲವಿದ್ಯುತ್ ಯೋಜನೆ
5. ಸೀತಾನದಿ ಕಿರು ಜಲವಿದ್ಯುತ್ ಯೋಜನೆ
6. ಎಳನೀರು ಕಿರು ಜಲವಿದ್ಯುತ್ ಯೋಜನೆ
7. ಪಯಸ್ವಿನಿ ಕಿರು ಜಲವಿದ್ಯುತ್ ಯೋಜನೆ
8. ಪರ್ಪಿಕಲಾ ಕಿರು ಜಲವಿದ್ಯುತ್ ಯೋಜನೆ

ಆ) ವರಾಹಿ 3ನೇ ಮತ್ತು 4ನೇ ಘಟಕಗಳು, ಸರಪಾಡಿ ಜಲವಿದ್ಯುತ್ ಯೋಜನೆಗಳನ್ನು ಕರ್ನಾಟಕ ವಿದ್ಯುತ್ ನಿಗಮದ ವತಿಯಿಂದ ಅನುಷ್ಠಾನಗೊಳಿಸಲಾಗುವುದು. ಹಾಗೂ ಇತರೇ ಕಿರು ಜಲವಿದ್ಯುತ್ ಯೋಜನೆಗಳನ್ನು ಸರ್ಕಾರದ ಆದೇಶದಂತೆ ಖಾಸಗಿಯವರು ಅನುಷ್ಠಾನಗೊಳಿಸುವರು.

ಇ)

ಯೋಜನೆ	ಗ್ರಾಮಗಳು	ವಿದ್ಯುತ್ ಪ್ರಮಾಣ
1. ಸರಪಾಡಿ	7	215 ಮೆ. ಯೂನಿಟ್‌ಗಳು
2. ವರಾಹಿ 3 ಮತ್ತು 4 ಘಟಕಗಳು	ಇಲ್ಲ	ಒಟ್ಟು 4 ಘಟಕಗಳಿಂದ 1002 ಮೆ. ಯೂನಿಟ್‌ಗಳು.

ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪಕೇಂದ್ರದ ಬಗ್ಗೆ

5054 - ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ಔರಾದ್ ತಾಲ್ಲೂಕಿಗೆ ವಿದ್ಯುತ್ ಪೂರೈಕೆಯಾಗುತ್ತಿರುವುದರಿಂದ, ಇಡೀ ತಾಲ್ಲೂಕಿಗೆ ಅಸಮರ್ಪಕ ರೀತಿಯಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲಾಖೆಯಲ್ಲಿ ಕಳೆದ 15 ವರ್ಷಗಳಿಂದಲೂ ವಿದ್ಯುಚ್ಛಕ್ತಿ ಪೂರೈಕೆಗಾಗಿ 110 ಕೆ.ವಿ. ಸಂತಪುರ ಸ್ಟೇಷನ್ ಮತ್ತು 33 ಕೆ.ವಿ. ಖೇಡ್ರಾ (ಬಿ) ಸ್ಟೇಷನ್ ಹಾಗೂ ಠಾಣಾ ಖಿಷನೂರ್ ಸ್ಟೇಷನ್‌ನನ್ನು ಔರಾದ್ ತಾಲ್ಲೂಕಿನಲ್ಲಿ ಸಮರ್ಪಕ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಶಿಫಾರಸ್ಸು ಮಾಡಿರುವುದು ನಿಜವಲ್ಲವೇ?

ಇ) ಹಾಗಿಲ್ಲದಿದ್ದರೆ, ಸರ್ಕಾರದ ಉದ್ದೇಶವೇನು?

ಈ) ಸರ್ಕಾರವು ಈ ವಿಷಯದಲ್ಲಿ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಔರಾದ್ ತಾಲ್ಲೂಕಿಗೆ ವಿದ್ಯುಚ್ಛಕ್ತಿ ಪೂರೈಕೆಯು ಭಾಲ್ಕಿ 110 ಕೆ.ವಿ. ವಿದ್ಯುತ್ ಕೇಂದ್ರದಿಂದ ಆಗುತ್ತಿರುವುದು ನಿಜ. 110 ಕೆ.ವಿ. ಭಾಲ್ಕಿ ಕೇಂದ್ರದಿಂದ ಹೊರಡುವ 33 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವು ಔರಾದ್‌ನ 33 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಲ್ಲದೆ, ಸಂತಪುರ ಮತ್ತು ಕಮಲನಗರದಲ್ಲಿರುವ ಇನ್ನೂ ಎರಡು 33 ಕೆ.ವಿ. ವಿದ್ಯುತ್ ಉಪ-ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಇದು ಔರಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ಉಂಟು ಮಾಡುತ್ತಿದೆ.

ಆ), ಇ) ಮತ್ತು ಈ) ಈಗಿರುವ ಔರಾದ್‌ನ 33 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 110 ಕೆ.ವಿ.ಯ ಮಟ್ಟಕ್ಕೆ ಮೇಲ್ದರ್ಜೆಗೇರಿಸಲು ಒಂದು ವಿವರವಾದ ತಾಂತ್ರಿಕ ವರದಿಯನ್ನು ಸಿದ್ಧಪಡಿಸಲಾಗಿದ್ದು, ಇದನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗುವುದು. ಖೇರ್ಡಾ (ಬಿ) ಮತ್ತು ಠಾಣಾ ಖುಷನೂರು 33 ಕೆ.ವಿ. ವಿದ್ಯುತ್ ಉಪಕೇಂದ್ರಗಳ ಸ್ಥಾಪನೆ ಬಗ್ಗೆ ವಿವರವಾದ ತಾಂತ್ರಿಕ ವರದಿಯನ್ನು ಸಿದ್ಧಪಡಿಸಲು ಹೆಚ್ಚಿನ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. ಆದರೂ ಸಹಾ, ಔರಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ತೋರಿರುವ ಕಡಿಮೆ ವೋಲ್ಟೇಜ್ ಪರಿಸ್ಥಿತಿಯನ್ನು ನಿವಾರಿಸುವ ದೃಷ್ಟಿಯಿಂದ ಒಂದು ಪ್ರತ್ಯೇಕವಾದ 33 ಕೆ.ವಿ.ಯ ಜೋಡಿ ಮಾರ್ಗವನ್ನು ಭಾಲ್ಕಿ 110 ಕೆ.ವಿ. ಕೇಂದ್ರದಿಂದ ಸಂಗಮ ಕ್ರಾಸ್‌ವರೆಗೆ ಹಾಗೂ 33 ಕೆ.ವಿ.ಯ ಒಂಟಿ ಮಾರ್ಗವನ್ನು ಸಂಗಮ ಕ್ರಾಸ್‌ನಿಂದ ಸಂತಪುರಕ್ಕೆ ನಿರ್ಮಿಸುವ ಪ್ರಸ್ತಾವನೆಗೆ ದಿನಾಂಕ 2.8.2000ದಂದು ಅಂಗೀಕಾರ ನೀಡಲಾಗಿದೆ.

ಔರಾದ್ ತಾಲ್ಲೂಕಿನಲ್ಲಿ ಪಡಿತರ ಆಹಾರ ಧಾನ್ಯ ವಿತರಣೆ

5055 -ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳ ಡೀಲರುಗಳು ಹತ್ತಿರ ಬೋಗಸ್ ಹಸಿರು ಕಾರ್ಡುಗಳಿದ್ದು ಅಂಥ ಬೇನಾಮಿ ಕಾರ್ಡುಗಳ ಆಧಾರದ ಮೇಲೆ ಆಹಾರ ಧಾನ್ಯ ಎತ್ತಿ, ದುರುಪಯೋಗ ಮಾಡುವ ಸಂಗತಿ ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದರೆ ಸರ್ಕಾರ ಕೈಗೊಂಡ ಕ್ರಮವೇನು ?

ಆ) ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಯಾವುದೇ ಬಿಲ್ ಕೊಡದೇ ರಸೀದಿ ಕೊಡದೇ ಹೆಚ್ಚಿನ ದರದಲ್ಲಿ ಆಹಾರ ಧಾನ್ಯ ಬಡವರಿಗೆ ಮಾರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಕೈಗೊಂಡ ಕ್ರಮವೇನು ?